ಮೊದಲ ತಿಂಗಳ ಸಂಬಳ ಬಂದಾಗ ಸಂತೋಷವಾಗಲಿಲ್ಲ. ದುಃಖವಾಯಿತು. ಬಿಕ್ಕಿ ಬಿಕ್ಕಿ ಅತ್ತೆ. ಅಮ್ಮ ಇಲ್ಲವಲ್ಲ. ಅಮ್ಮನಿಗೆ ಹೊಸ ಸೀರೆ ಕೊಡಿಸಿ, ಉಡಿಸಿ, ಜಟಕಾ ಗಾಡಿಯಲ್ಲಿ ತಿರುಗಾಡಿಸಲಾಗದ ಅದೃಷ್ಟ ಇಲ್ಲವಲ್ಲ...

ದುಃಖಕ್ಕೆ ದುಃಖವೇ ಕೊನೆ...

ಹಣದ ಬಗ್ಗೆ ಅತೃಪ್ತಿ ಮೂಡಿತು.

ಅಪ್ಪ... ಛೇರ್ಮ್‌ನ್‌ನಾಗಿ ಇಡೀ ಗ್ರಾಮವನ್ನು ಹೆದರಿಸುತ್ತಿದ್ದ ಅಪ್ಪ ಮುರುಕು ಮನೆಯಲ್ಲಿ ದೈನೇಸಿಯಾಗಿ ಹೆಂಡ ಕುಡಿಯುತ್ತಾ ಇರುವಾಗ ನಾನು ಕಾಲೇಜಿನಲ್ಲಿರುತ್ತಿದ್ದೆ– ಹುಡುಗ–ಹುಡುಗಿಯರ ಮಧ್ಯೆ...

★★★

ಆ ಹುಡುಗಿಯ ಹೆಸರು ದೀಪಾಲಿ. ನನ್ನ ದುಃಖದ ಜೀವನಕ್ಕೆ ಅವಳೊಂದು ನೆರಳೆಂದು ಕಾಣಿಸಿತೋ– ಇಲ್ಲ, ನಿಜಕ್ಕೂ ಅವಳು ಚೆನ್ನಾಗಿದ್ದಳೋ... ಗೊತ್ತಿಲ್ಲ... ಆದರೆ ಅಂತರಂಗದ ಬೇಗುದಿಗೆ ಆಕೆ ತಣ್ಣೀರು ಹಾಕಿದಳು. ನೋಡುವವರಿಗೆ ಸ್ವಲ್ಪ ಹೆಚ್ಚೇ ಎನ್ನುವಷ್ಟು. ಒಡನಾಟ ಶುರುವಾಯಿತು. ಎಷ್ಟು ಅಂದರೆ ಅವಳೇ ಘನತುಂಬಿ, ಮನತುಂಬಿ, ಎದೆತುಂಬಿ... ಎಷ್ಟು ಎಂದರೆ ಪ್ರಿನ್ಸಿಪಾಲರು ಕರೆದು ಎಚ್ಚರಿಕೆ ಕೊಡುವಷ್ಟು... ಸಹೋದ್ಯೋಗಿಗಳು ಮತ್ಸರಪಡುವಷ್ಟು...

'ಚಂದ್ರಪ್ಪ, ನೀನು ಅದೃಷ್ಟ ಹೀನ ಕಣೋ' ಎಂದು ಮನಸ್ಸು ಕೂಗಿ ಹೇಳಿತು... ಇಲ್ಲದಿದ್ದರೆ ಹೀಗೆ ಆಗುತ್ತಿತ್ತಾ... ಜೀವನ ಸರಿದಾರಿಯಲ್ಲಿ, ನೇರದಾರಿಯಲ್ಲಿ ಹೋಗಲು ಬಿಡುವುದೇ ಇಲ್ಲ... ಹೋದಲೆಲ್ಲಾ ಬೆಳಕು ಆರುತ್ತದೆ, ಬಾಗಿಲು ಹಾಕುತ್ತದೆ... ಕಾಗದ ಕೊಟ್ಟವನು ಅಟೆಂಡರ್, ಬರೆದವಳು ದೀಪಾಲಿ...

'ಸಾರ್, ನಾವು ಅಂದುಕೊಂಡಂತೆ ಎಲ್ಲವೂ ಆಗುವುದಿಲ್ಲ. ಬೆಹರಾನ್ ಬ್ಯಾಂಕಿನಲ್ಲಿ ಹುಡುಗ ಕೆಲಸದಲ್ಲಿದ್ದಾನೆ. ಎಂಟು ದಿನಗಳಲ್ಲಿ ಮದುವೆ...'

ವಿಧೇಯೇ.

ಅಪ್ಪನ ಕುಡಿತ ನೋಡಿ ಎಂದೂ ಕುಡಿಯಬಾರದು ಎಂದು ದೃಢ ನಿಶ್ಚಯ ಮಾಡಿದವನು ಅಂದು ಸೀದಾ ಬಾರಿಗೆ ಹೋಗಿ ಕುಳಿತೆ. ಇನ್ನೇನು ವಿಸ್ಕಿಯ ಗ್ಲಾಸನ್ನು ಎತ್ತಬೇಕು. ಗ್ಲಾಸಿನಲ್ಲಿ ಅಮ್ಮ ಕಾಣಿಸಿದಳು... 'ನೀನೂ ನಿನ್ನಪ್ಪನ ಥರ ಆಗ್ತಿಯೇನೋ...' ಎಂದಳು. 'ನೀನು ವಿದ್ಯಾವಂತ, ನಾನು ಹೂಸು ಬುಡುಕಿ ಬಿಡು....' ಎಂದಂತಾಯಿತು.

ಕುಡಿಯಲಿಲ್ಲ.

ಬಿಲ್ಲು ಕೊಟ್ಟು ಹೊರ ಬಂದೆ. ಅಮ್ಮ ಆವರಿಸಿಕೊಂಡಳು.

★★★

ಊರಿಗೆ ಹೋಗಲಿಲ್ಲ ಮತ್ತೆ.

ಹೋಗಿದ್ದೆ ಒಂದೇ ಸಲ... 'ಅಪ್ಪನ ಕೊನೆಯ ದಿನಗಳೆಂದು' ಊರಿನವ ಹೇಳಿದಾಗ– ಅಪ್ಪ ನಡುಮನೆಯಲ್ಲಿ ಮಲಗಿದ್ದ ನರಳುತ್ತಾ. ಹೋದ ದಿನ ನನ್ನ ಕೈ ಹಿಡಿದುಕೊಂಡು ಕಣ್ತುಂಬಾ ಅತ್ತ. ನಾನು ಯಾಕೆ ಎಂದು ಕೇಳಲಿಲ್ಲ. ಅಪ್ಪ ಅತ್ತು ಕರಗುವುದಕ್ಕೆ ಸಾವಿರ ಕಾರಣಗಳಿದ್ದವು. ಆತನ ಬಾಯಲ್ಲಿ ಉಸಿರೇ ಹೊರಡುತ್ತಿರಲಿಲ್ಲ. ಬರೇ ನಿಟ್ಟುಸಿರು.

ನನ್ನ ಕೈಹಿಡಿದೇ ಇದ್ದ. ಬಿಡಲಿಲ್ಲ. ಅಲ್ಲೇ ಪ್ರಾಣ ಪಕ್ಷಿ ಹಾರಿ ಹೋಯಿತು.

★★★